ಅವನ ಮುಖ ಚೆನ್ನಾಗಿ ನೆನಪಿತ್ತು. ಅದೇ ಸಿಡುಬು ಕಲೆ. ಕಪ್ಪನೆಯ ಎತ್ತರದ ವ್ಯಕ್ತಿ. 'ಆ ದಿನ ಹೇಳಿದಿರಲ್ಲ ತಾಯಿ, ಮಣ್ಣಿನ ಕೆಳಗೆ ಒಬ್ಬ ಸಿಕ್ಕಿ ಬಿದ್ದಿದ್ದ ಎಂದು. ನನ್ನ ಮಗ ಅವನು' ಎಂದ, ಬೆಳಕಿಲ್ಲದ ಕಣ್ಣುಗಳನ್ನು ಹರಿಸಿ. 'ಓಹ್' ಎಂದುದ್ಗರಿಸಿದಳು ಅವಳು. 'ಏನಾಯ್ತು?'

'ಸತ್ತು ಹೋದ. ಮಣ್ಣಿನಿಂದ ಹೊರಗೆ ತೆಗೆದಾಗ ಇನ್ನೂ ಜೀವವಿತ್ತಂತೆ. ಕಾರ್ಪೋರೇಷನ್‌ನವರೇ ಆಸ್ಪತ್ರೆಗೆ ಸೇರಿಸಿದರಂತೆ. ಮೈ ಕೈಯೆಲ್ಲ ನಜ್ಜು ಗುಜ್ಜಾಗಿತ್ತು. ರಾತ್ರಿ ಎಷ್ಟು ಹೊತ್ತಾದರೂ ಮನೆಗೆ ಬಂದಿಲ್ಲವೆಂದು ಗಾಬರಿಯಿಂದ ಹುಡುಕಾಡಿ ಬೆಳಗ್ಗೆ ಆಸ್ಪತ್ರೆಗೆ ಹೋಗುವಷ್ಟರಲ್ಲಿ ಕೊನೆಯುಸಿರು ಎಳೆದಿದ್ದ. ನನಗವನು ಒಬ್ಬನೇ ಮಗ. ಮದುವೆಯಾಗಿ ಒಂದು ವರ್ಷವಾಗಿತ್ತಷ್ಟೇ. ಹೆಂಡತಿ ತುಂಬಿದ ಬಸುರಿ' ಎಂದು ತಣ್ಣಗೆ ಹೇಳಿದ.

ಅವನ ಮಾತುಗಳನ್ನು ಕೇಳಿ ಅವಳ ಮನಸ್ಸು ಬೆಂಗಳೂರಿನ ಸಂಜೆ ಮಳೆಯ ಹಾಗೆ ಆರ್ದ್ರವಾಯಿತು.

## ಗೋಪಾಲಕೃಷ್ಣ ಪೈ

ಲೇಖಕರು ಕತೆಗಾರರಾಗಿ, ಕಾದಂಬರಿಕಾರರಾಗಿ, ಅನುವಾದಕರಾಗಿ ಗುರುತಿಸಿಕೊಂಡಿದ್ದಾರೆ. ಕಾಸರಗೋಡಿನ ಪೆರ್ಲದವರಾದ ಅವರು ಈಗ ನೆಲೆಸಿರುವುದು ಬೆಂಗಳೂರಿನಲ್ಲಿ.
1966 ರಿಂದಲೇ ಸಣ್ಣಕತೆಗಳನ್ನು ಬರೆಯಲು ಆರಂಭಿಸಿದರೂ ಅವರ ಮೊದಲ ಕಥಾ ಸಂಗ್ರಹ 'ತಿರುವು' ಪ್ರಕಟವಾಗಿದ್ದು 1985ರಲ್ಲಿ. ಬಳಿಕ 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ' ಕಥಾ ಸಂಗ್ರಹಗಳು ಪ್ರಕಟಗೊಂಡವು. ಈ ಮೂರೂ ಸಂಗ್ರಹಗಳು ಸೇರಿದಂತೆ **35** ಕತೆಗಳ ಸಂಗ್ರಹ 'ಮೂರು ಮತ್ತಿಷ್ಟು' 2010ರಲ್ಲಿ ಪ್ರಕಟವಾಗಿದೆ. ಅವರ ಕಾದಂಬರಿ 'ಸ್ವಪ್ನ ಸಾರಸ್ವತ'. 'ಆಧುನಿಕ ಚೀನಿ ಸಣ್ಣಕತೆಗಳು', 'ಚೆಕೋವನ ಕೊನೆಯ ದಿನಗಳು', 'ಮೋಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅವರ ಅನುವಾದಿತ ಪುಸ್ತಕಗಳಾಗಿವೆ. 'ಕನಸೆಂಬೋ ಕುದುರೆಯನೇರಿ' ಸಿನಿಮಾಕ್ಕೆ ಚಿತ್ರಕತೆ ಬರೆದಿರುವ ಅವರು ಅದರ ಅತ್ಯುತ್ತಮ ಚಿತ್ರಕತೆಗಾಗಿ ಈ ಸಿನಿಮಾದ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರೊಂದಿಗೆ ರಾಷ್ಟ್ರಪ್ರಶಸ್ತಿಗೆ ಪಾತ್ರರಾಗಿದ್ದಾರೆ.